ಸಂಸ್ಥೆಗಳು, ದಾನಿಗಳ ಮೂಲಕ ಬಿಪಿಎಲ್ ಜನರಿಗೆ ಉಚಿತ ಚಿಕಿತ್ಸೆ ಒದಗಿಸಲು ಸಲಹೆ ನೀಡಲಾಗುತ್ತಿದೆ.

ಊ) ಅನುದಾನವನ್ನು ನಿಯಮಿತವಾಗಿ ಬಿಡುಗಡೆ ಮಾಡುವುದು

ಋ) ಯೋಜನೆ ರೂ.185.00 ಲಕ್ಷ

ಯೋಜನೇತರ ರೂ.3991.44ಲಕ್ಷ ಸಿಬ್ಬಂದಿವೇತನ, ಕಚೇರಿ ವೆಚ್ಚ, ಔಷಧಿ ಮುಂತಾದ ಸಂಪೂರ್ಣ ನಿರ್ವಹಣೆ.

433 ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವೈದ್ಯಕೀಯ ಸ್ನಾತ್ತಕೋತ್ತರ ಪದವಿಯಲ್ಲಿ ಸಿ.ಇ.ಟಿ. ಮುಖಾಂತರ ಎಷ್ಟು ಜನ ವಿದ್ಯಾರ್ಥಿಗಳಿಗೆ ಸೀಟು ಹಂಚಿಕೆ ಮಾಡಲಾಗಿದೆ?

ಆ) ಸಿ.ಇ.ಟಿ. ಮುಖಾಂತರ ಪಿ.ಜಿ. ಪದವಿ ಪಡೆದಿರುವಂತಹ ವಿದ್ಯಾರ್ಥಿಗಳು ಪ್ರವೇಶ ಪಡೆಯದೆ ಸೀಟನ್ನು 'ಸರಂಡರ್' ಮಾಡಿರುವಂತಹ ವಿದ್ಯಾರ್ಥಿಗಳು ಎಷ್ಟು?

ಶ್ರೀರಾಮಚಂದ್ರಗೌಡ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ವೈದ್ಯಕೀಯ –526

ದಂತ ವಿಜ್ಞಾನ –169

ಆ) 22

373 ಶ್ರೀ ಕರಡಿಸಂಗಣ್ಣ ಅಮರಪ್ಪ : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಕೇಂದ್ರ ಸ್ಥಾನವಾದ ಕೊಪ್ಪಳ ನಗರಕ್ಕೆ ಹೊಸ ವೈದ್ಯಕೀಯ ಕಾಲೇಜನ್ನು ಮಂಜೂರು ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ ಯಾವ ಸಾಲಿನಿಂದ ಪ್ರಾರಂಭಿಸಲಾಗುವುದು;

ಆ) ಸದರಿ ಕಾಲೇಜನ್ನು ಪ್ರಸಕ್ತ ಸಾಲಿನಲ್ಲಿಯೇ ಮಂಜೂರು ಮಾಡಲಾಗುವುದೇ; ಹಾಗಿದ್ದಲ್ಲಿ, ಕಾಲೇಜು ಪ್ರಾರಂಭಿಸಲು ಸರ್ಕಾರವು ಅನುದಾನವನ್ನು ನಿಗದಿಪಡಿಸಿದೆಯೇ (ವಿವರ ನೀಡುವುದು)?